ಕಾದಂಬರಿಯನ್ನು ಕನ್ನಡಿಸಲು ಮೊಗಳ್ಳಿಗೆ ಕೊಟ್ಟದ್ದು ನೆನಪಾಗುತ್ತದೆ. ಈ ಕಾದಂಬರಿಯನ್ನು ಕೂಡ ಪಶ್ಚಿಮದ ವಿಮರ್ಶೆ ಮಾಂತ್ರಿಕ ವಾಸ್ತವತಾವಾದಿ ಕಾದಂಬರಿ ಎಂದು ಕೈ ತೊಳೆದುಕೊಂಡಿದೆ! ಭಾಷಾ ಭಾರತಿಯ ಯೋಜನೆಗಳಿಗಾಗಿ ಈ ಕಾದಂಬರಿಯ ಸಂಗ್ರಹರೂಪವನ್ನು ಅಥವಾ ಆಯ್ದ ಭಾಗಗಳನ್ನು ಕನ್ನಡಿಸಲು ಮೊಗಳ್ಳಿಯನ್ನು ಕೇಳಿಕೊಂಡೆ. ನಾನು ಟುಟುವೋಲನ ಕಾದಂಬರಿ ಕೊಟ್ಟ ಕೆಲವೇ ದಿನಗಳಲ್ಲಿ ಮೊಗಳ್ಳಿಯ ಹಳ್ಳಿ ಅನುಭವ ಹಾಗೂ ಕಥಾಪ್ರತಿಭೆಯಿಂದಾಗಿ ಜೊತೆಗೆ, ಆಫ್ರಿಕನ್ ದೇಶಿ ವಾಸ್ತವಕ್ಕೂ, ಕನ್ನಡ ಅನುವಾದಕನ ದೇಶಿ ವಾಸ್ತವಕ್ಕೂ ಪಕ್ಕಾ ನಂಟು ಬೆಳೆದದ್ದರಿಂದಾಗಿ, 'ಎಂಡಗುಡುಕ' ಎಂಬ ಅಪರೂಪದ ನೀಳ್ಗತೆ ಸೃಷ್ಟಿಯಾಯಿತು. ಅದು ಮೊಗಳ್ಳಿ ತಾನೇ ಕನ್ನಡದಲ್ಲೇ ಬರೆದಂತಿತ್ತು. 'ಇದೆಂಗ್ ಇಷ್ಟ್ ಚೆನಾಗ್ ಬಂತೋ?' ಎಂದು ವಿಸ್ಮಯದಿಂದ ಕೇಳಿದಾಗ ಮೊಗಳ್ಳಿಯ ಉತ್ತರ: 'ನಮ್ಮಪ್ಪ ಎಂಡ ಇಳಿಸುತ್ತಿದ್ದ. ಅವನ ಹಿಂದೆ ಹೋಗ್ತಾ ಇದ್ದೆ. ಇದೆಲ್ಲ ನನ್ನ ಕತೇನೇ ಅನ್ನಿಸ್ತು. ಹಂಗಾಗಿ...'

ಆದರೆ, ಇದಕ್ಕೂ ಮುನ್ನ ಹಾಗೂ ಅನಂತರ 'ಮಾಂತ್ರಿಕ ವಾಸ್ತವತಾವಾದಿ' ಎನ್ನಲಾಗುವ ಧಾಟಿ ಹಿಡಿದಿದ್ದ ತನ್ನ ಕಥೆ, ಕಾದಂಬರಿಗಳಲ್ಲಿ ಈ ಥರದ ಯಶಸ್ಸು ಮೊಗಳ್ಳಿಗೆ ದಕ್ಕಿದಂತಿಲ್ಲ. ಮಾಂತ್ರಿಕ ವಾಸ್ತವತಾವಾದಿ ಎಂದು ಕರೆಯಲಾಗುವ ಕೃತಿಗಳೂ ತಮ್ಮದೇ ಆದ ಆಂತರಿಕ ತರ್ಕವನ್ನು ಸೃಷ್ಟಿಸಿಕೊಳ್ಳುವುದನ್ನು ಮಾರ್ಕ್ವೆಜ್ ಕಥೆ, ಕಾದಂಬರಿಗಳು ತೋರಿಸಿಕೊಟ್ಟಿವೆ. ಮಾರ್ಕ್ವೆಜ್ ಕಥಾಲೋಕದ ವಿದ್ಯಮಾನಗಳು, ವರ್ಣನೆಗಳು ಮೇಲುನೋಟಕ್ಕೆ ಮಾಂತ್ರಿಕ; ಆದರೆ, ಅಲ್ಲಿರುವುದು ವಿವಿಧ ಸ್ತರಗಳ ವಾಸ್ತವ! ಮೊಗಳ್ಳಿಯ 'ತೊಟ್ಟಿಲು' ಕಾದಂಬರಿಯಲ್ಲೂ ಅಪ್ರಜ್ಞೆಯ ಸ್ತರದ ಸತ್ಯಗಳು ಆಗಾಗ ಕಾಣುತ್ತವೆ. ಕಾದಂಬರಿಯ ಆಂತರಿಕ ತರ್ಕ ಮಾತ್ರ ದಿಕ್ಕೆಡುತ್ತಿರುತ್ತದೆ. ಮೊಗಳ್ಳಿ ಮೈದುಂಬಿ ಬರೆವ ಗಳಿಗೆಗಳಲ್ಲಿ ಅನಾಯಾಸವಾಗಿ ಉಕ್ಕಿ ಬಂದ ಭಾಷೆಯಲ್ಲಿ ಕಾದಂಬರಿಗೆ ಕಸುವು ದಕ್ಕುತ್ತದೆ; ಘಟನಾವಳಿಗಳನ್ನು ಒಗ್ಗೂಡಿಸುವ ಕೇಂದ್ರ ಎಳೆ ಕೈತಪ್ಪಿ ಗೊಂದಲಪುರವಾಗುತ್ತದೆ. ಅಂದರೆ, ಮೊಗಳ್ಳಿಯ ಉತ್ತಮ ಸಣ್ಣಕಥೆಗಳ ಕಥಾನಾಗಾಲೋಟದಲ್ಲೇ ಮೈದಾಳುವ ಕೇಂದ್ರ ಇಲ್ಲಿ ಸಿಕ್ಕದೇ ಹೋಗುತ್ತದೆ.

ಇಂಥ ಪ್ರಶ್ನೆಗಳನ್ನು ತೀರಾ ಹಚ್ಚಿಕೊಳ್ಳದೆ ಗಣೇಶ್ ಸುಮ್ಮನೆ ಬರೆಯುತ್ತಲೇ ಹೋದಂತಿದೆ. ಮೊಗಳ್ಳಿಯ ಹತ್ತಿರ ಹತ್ತಿರ ನೂರು ಕಥೆಗಳು ಹಾಗೂ ಐದು ಕಾದಂಬರಿಗಳಲ್ಲಿ ಕಳೆದ ನೂರು ವರ್ಷಗಳ ಭಾರತದ, ಕರ್ನಾಟಕದ ಚರಿತ್ರೆಯೂ ಹರಡಿಕೊಂಡಿದೆ. ತುರ್ತು ಪರಿಸ್ಥಿತಿ ಹಾಗೂ ದೇವರಾಜ ಅರಸರ ಕಾಲದಲ್ಲಿ ಜಾರಿಗೆ ಬಂದ ಭೂಸುಧಾರಣಾ ಕಾಯ್ದೆಯ ಪರಿಣಾಮದ ಅಗೋಚರ ವಿವರಗಳೂ ಇಲ್ಲಿ ದಾಖಲಾಗಿವೆ. ಚರಿತ್ರೆಯ ಬರವಣಿಗೆ, ಸಾಮಾಜಿಕ ವಿಶ್ಲೇಷಣೆ, ಪತ್ರಿಕಾ ಬರವಣಿಗೆಗಳು ಸುಲಭವಾಗಿ ಗುರುತಿಸಲಾಗದ ಅಲ್ಲೋಲಕಲ್ಲೋಲಗಳನ್ನು 'ತುರ್ತು ಪರಿಸ್ಥಿತಿ' ಥರದ ಕಥೆಗಳು ಹಿಡಿಯಲೆತ್ನಿಸಿವೆ. ದೇವರಾಜ ಅರಸರ ಮೇಲೆ ಹಲ್ಲೆ ಮಾಡಲು ಹೋದ ಭೂಮಾಲೀಕ; ಅರಸು ಸಹಿಯಿಂದಾಗಿ ದಕ್ಕಿದ ಜಮೀನಿನಲ್ಲಿ ತಾನು ಬೆಳೆದ ತೆಂಗಿನ ಮರದ ಎಳನೀರು ಕುಡಿಸಲು ಸೈಕಲ್ ತುಳಿದು ಬೆಂಗಳೂರು ತಲುಪಿ ಅರಸು ಅವರನ್ನು ಹುಡುಕಿದ ಮಾರಯ್ಯ... ಈ ಥರದ ಅಗೋಚರ ಚಾರಿತ್ರಿಕ ಪಾತ್ರಗಳು ಇಲ್ಲಿವೆ. ಇಂಥ ನೂರಾರು ಚಿತ್ರಗಳು ಮೊಗಳ್ಳಿ ಕಥಾಲೋಕದ ಪ್ರಜ್ಞಾಪ್ರವಾಹದಲ್ಲಿ ಉಕ್ಕಿ ಒದಗಿ ಬಂದು ಎಲ್ಲೆಂದರಲ್ಲಿ ಸೇರಿಕೊಂಡಿವೆ

## 5

ಬಹುಕಾಲ ಉದ್ಯೋಗವಿಲ್ಲದೆ ಸುತ್ತಾಡಿ, ಕೊನೆಗೆ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಅಧ್ಯಾಪಕ ವೃತ್ತಿಯ ಮೂಲಕ ಮೊಗಳ್ಳಿಯ ಬರೆವ ಬದುಕಿನ ಎರಡನೇ ಇನ್ನಿಂಗ್ಸ್ ಶುರುವಾಯಿತು. ಹದಿಹರೆಯ, ತಾರುಣ್ಯಗಳಲ್ಲಿ ಫಿಲಾಸಫಿ, ಐಡಿಯಾಲಜಿಗಳಲ್ಲಿ ಮುಳುಗುವ ಒಲವು, ಬದ್ಧತೆಗಳು ಕಡಿಮೆಯಿದ್ದ ಗಣೇಶ್ ಅಧ್ಯಾಪನ-ಸಂಶೋಧನದ ವೃತ್ತಿಯಲ್ಲೂ ಮೆಥೆಡಾಲಜಿಗಳ ಬಗ್ಗೆ ಒಲವು ತೋರಿದಂತಿಲ್ಲ. ಇದಕ್ಕೆ ಪ್ರಜ್ಞಾಪೂರ್ವಕ ಕಾರಣಗಳಿಗಿಂತ ಮೊಗಳ್ಳಿಯ ಸೃಜನಶೀಲ ಮನಸ್ಸು ನಿಜಕ್ಕೂ ತೊಡಗುತ್ತಿದ್ದುದು ಕಥೆಯಲ್ಲಿ ಹಾಗೂ ಕಥೆ ಹೇಳುವುದರಲ್ಲಿ ಎಂಬುದು ಮುಖ್ಯ ಕಾರಣವಿರಬೇಕು. ಜೊತೆಗೆ, ಕೆಲವಾದರೂ ಜ್ಞಾನಶಿಸ್ತುಗಳನ್ನು ಒಂದು